ತಾರೀಖು 18ನೆ ಡಿಸೆಂಬರ್ 1906.

ನಂ. 5261 ಮೆಡಿ. 4—06—15, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಮಿ" ಎಫ್. ನರೋನಾ ಯವರನ್ನು, ಶಿವನಸಮುದ್ರಕ್ಕೆ ವರ್ಗಾಯಿಸಲ್ಪಟ್ಟಿರುವ ಸೆಬ್ ಅಸಿಸ್ಟೆಂಟ್ ಸರ್ಜನ್, ಮೆ॥ ಟಿ. ಎಸ್. ಶಿದ್ದಪ್ಪನವರಿಗೆ ಬದಲಾಗಿ, ಮೂಡಗೆರೆಯಲ್ಲಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿಗೆ ವರ್ಗಾಯಿಸಿ ಇದೆ.

ತಾರೀಖು 19ನೆ ಡಿಸೆಂಬರು 1906.

ನಂ. 5281 ಮೆಡಿಕಲ್. 198—06—1, ಮೇಜರ್ ಎಚ್.ಇ. ಡ್ರೇಕ್ ಬ್ರಾಕ್ಮನ್, ಐ. ಎಂ. ಎಸ್. ರವರು ಶ್ರೀಮನ್ಮಹಾರಾಜರವರ ಜತೆಯಲ್ಲಿ ಕೆಲಸದಮೇಲೆ ಹೋಗಿರುವ ಕಾಲದಲ್ಲಿ ಸೆಂಟ್ರಲ್ ಜೈಲಿನ ಅಫಿಷಿಯೇಟಿಂಗ್ ಸೂಪರಿಂಟೆಂಡೆಂಟರಾದ ಮಿ॥ ಪಿ. ಎಸ್. ಅಚ್ಯುತರಾಯರವರು ಮೈಸೂರು ಸರ್ಕಾರದ ಸೀನಿಯರ್ ಸರ್ಜನ್ ಮತ್ತು ಸ್ಯಾನಿಟರಿ ಕಮಿಷನರಾಗಿಯೂ ಮೈಸೂರು ಸೀಮೆಯ ಬಂದೀಖಾನೆಗಳ ಇನ್ಸ್ಪೆಕ್ಟರ್ ಜನರಲ್ಲಾಗಿಯೂ ಕೆಲಸ ನೋಡುವರು.

2. ಸರ್ಕಾರಿ ನೇತ್ರವೈದ್ಯರಾದ ಡಾಕ್ಟರ್ ಎಸ್. ವಿ. ರಾಮಸ್ವಾಮಿಯ್ಯಂಗಾರ್ಯರವರು, ಮಿ॥ ಪಿ. ಎಸ್. ಅಚ್ಯುತರಾಯರವರು ಬೇರೆ ಕೆಲಸದಮೇಲೆ ಇರುವ ವರೆಗೆ ಅಥವಾ ಇನ್ನೊಂದು ಹುಕುಮು ಕೊಡುವವರೆಗೆ, ತಮ್ಮ ಕೆಲಸದ ಜತೆಗೆ ಬೆಂಗಳೂರು ಸೆಂಟ್ರಲ್ ಜೈಲಿನ ಚಾರ್ಜಿನಲ್ಲಿರುವರು.

ತಾರೀಖು 20ನೆ ಡಿಸೆಂಬರ್ 1906.

ನಂ. ಜೆ. 1707—ರಿಜಿಸ್ 11—06—5, ಹರಿಹರದಲ್ಲಿ ಮತ್ತು ಆಲೂರಿನಲ್ಲಿ ಇರುವ ಸಬ್ ರಿಜಿಸ್ಟ್ರಿ ಕಚೇರಿಗಳು, 1907ನೆ ಇಸವಿಯ ಜನವರಿ 1ನೆ ತಾರೀಖಿನಿಂದ, ಪ್ರತ್ಯೇಕ ಸಬ್ ರಿಜಿಸ್ಟ್ರಾರ್‌ಗಳ ಚಾರ್ಜಿನಲ್ಲಿ ಇರುವುದಕ್ಕೆ ಬದಲಾಗಿ ಆಯಾ ಸಬ್ ತಾಲ್ಲೂಕುಗಳ ಡೆಪ್ಯುಟಿ ಅಮಲ್ದಾರರ ಚಾರ್ಜಿನಲ್ಲಿ ಇಡಲ್ಪಡುವುವು.

2. ಅದೇ ಮೇರೆ, ಈ ಕೆಳಿಗೆ ಕಂಡ ಸ್ಥಳಗಳಲ್ಲಿರುವ ಸಬ್ ರಿಜಿಸ್ಟ್ರೀ ಕಚೇರಿಗಳು, ಅದೇ ತಾರೀಖು ಮೊದಲ್ಗೊಂಡು, ಪ್ರತ್ಯೇಕ ಸಬ್ ರಿಜಿಸ್ಟ್ರಾರ್‌ಗಳ ಚಾರ್ಜಿನಲ್ಲಿ ಇರುವುದಕ್ಕೆ ಬದಲಾಗಿ ಆಯಾ ತಾಲ್ಲೂಕು ಶಿರಸ್ತೆದಾರರ ಚಾರ್ಜಿನಲ್ಲಿ ಇಡಲ್ಪಡುವುವು :—

1. ಸಾಗರ.
2. ಸೊರಬ.
3. ಶಿಕಾರಿಪುರ.
4. ಹೊನ್ನಾಳಿ.
5. ನಗರ.
6. ಕೊಪ್ಪ.
7. ಮೂಡಿಗರೆ.

3. ಮೇಲೆ ಹೇಳಿರುವ ಡೆಪ್ಯುಟಿ ಅಮಲ್ದಾರರೂ ತಾಲ್ಲೂಕು ಶಿರಸ್ತೆದಾರರೂ ತಮ್ಮ ತಮ್ಮ ಕಚೇರಿಗಳಿಗೆ ಉದ್ಯೋಗಪ್ರಯುಕ್ತವಾದ ಸಬ್ ರಿಜಿಸ್ಟ್ರಾರುಗಳಾಗಿ ಇದರಿಂದ ಬೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 29ನೆ ಡಿಸೆಂಬರ್ 1906.

ನಂ. ಜೆ. 1828—ಪೋಲೀಸು 69-06—6, ಶಿವಮೊಗ್ಗ ಡಿಸ್ಟ್ರಿಕ್ಟಿನ ಪೋಲೀಸು ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮಿ॥ ಬಿ. ಎಸ್. ರಾಜೋಜಿರಾವ್, ಬಿ. ಎ., ಯವರು, 1906ನೆ ಇಸವಿಯ ಅಕ್ಟೋಬರ್ 30ನೆ ತಾರೀಖಿನ ಜೆ. 1077 ಪೊ. 69-06-4ನೆ ನಂಬರಿನ ಸರ್ಕಾರಿ ಇಸ್ತಿಹಾರ್ನಾಮೆಯಲ್ಲಿ ತಮಗೆ ಕೊಡಲ್ಪಟ್ಟ 15 ದಿನಗಳ ಪ್ರಿವಿಲೀಜು ರಜಾವನ್ನು ಉಪಯೋಗಿಸಿಕೊಳ್ಳದೆ ಇರುವುದರಿಂದ ಸದರಿ ರಜಾವನ್ನು ಇದರಿಂದ ವಜಾ ಮಾಡಿದೆ.

ತಾರೀಖು 29ನೆ ನವಂಬರ್ 1906.

ನಂ. ಆರ್. 5556—ಎಲ್. ಆರ್. 252-06—4, ಅಸಿಸ್ಟೆಂಟ್ ಕಮಿಷನರುಗಳ ಚಾರ್ಜಿನಲ್ಲಿರುವ ಸಬ್ ಡಿವಿಜ್ಞಗಳಾಗಿ ತಾಲ್ಲೂಕುಗಳನ್ನು ಈ ಕೆಳಗೆ ತೋರಿಸುವಂತೆ ತಿದ್ದುಪಾಟು ಮಾಡಿ ಗುಂಪುಕೂಡಿಸಿರುವುದನ್ನು ಸಮಸ್ತ ಜನಗಳ ತಿಳುವಳಿಕೆಯ ಸಲುವ್ಗೆ ಪ್ರಕಟಿಸಿ ಇರುತ್ತದೆ :—

ಇದು 1907ನೆ ಇಸವಿಯ ಜುಲೈ ಗುರೆ ಲಾಗಾಯಿತು ಜಾರಿಯಲ್ಲಿ ಬರತಕ್ಕದ್ದು.

ಬೆಂಗಳೂರು ಡಿಸ್ಟ್ರಿಕ್ಟು.

ದೊಡ್ಡಬಳ್ಳಾಪುರ ದೇವನಹಳ್ಳಿ ನೆಲಮಂಗಲ	... .	... .	ದೊಡ್ಡಬಳ್ಳಾಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
ಬೆಂಗಳೂರು ಹೊಸಕೋಟೆ ಕೆಂಕಲ್ಲು	.. ..	... .	ಬೆಂಗಳೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.
ಕಾನಹಳ್ಳಿ ರಟ್ಟಿ ಪೇಟೆ ಸಬ್ ತಾಲ್ಲೂಕು ..	... ...	.. ..	ಕ್ಲೋಸ್‌ಪೇಟೆಯಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಕೋಲಾರ ಡಿಸ್ಟ್ರಿಕ್ಟು.

I	ಬೌರಿಂಗ್‌ಪೇಟೆ	..	ಡೆಪ್ಯೂಟಿ ಕಮಿಷನರು.
II	ಕೋಲಾರ	...	ಖಜಾನೆ ಅಸಿಸ್ಟೆಂಟ್ ಕಮಿಷನರು.
III	ಚಿಕ್ಕಬಳ್ಳಾಪುರ ಗೌರಿಬಿದನೂರು ಭಾಗೇಪಲ್ಲಿ ಗುಡಿಬಂಡೆ ಸಬ್ ತಾಲ್ಲೂಕು ಚಿಲ್ಲಸ್ಟೆಟ್ಟ	... .	ಚಿಕ್ಕಬಳ್ಳಾಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
IV	ಮಾಲೂರು ಮುಳಬಾಗಲು ಚಿಂತಾಮಣಿ ಶ್ರೀನಿವಾಸಪುರ	... ...	ಕೋಲಾರದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ತುಮಕೂರು ಡಿಸ್ಟ್ರಿಕ್ಟು.

I	ಕುಣಿಗಲ್	...	ಡೆಪ್ಯೂಟಿ ಕಮಿಷನರು.
II	ತುಮಕೂರು	...	ಖಜಾನೆ ಅಸಿಸ್ಟೆಂಟ್ ಕಮಿಷನರು.
III	ಮದ್ದಗಿರಿ ಪಾವಗಡ ಕೊರಟಗೆರೆ ಸಬ್ ತಾಲ್ಲೂಕು ಸೀರ್ಯ	... ...	ಮದ್ದಗಿರಿಯಲ್ಲಿರುವ ಅಸಿಸ್ಟೆಂಟ್ ಕಮಿಷನರು.
IV	ಗುಬ್ಬಿ ತಿಪಟೂರು ತುರುವೇಕೆರೆ ಸಬ್ ತಾಲ್ಲೂಕು ಚಿಕ್ಕನಾಯಕನಹಳ್ಳಿ	... .	ತುಮಕೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಮೈಸೂರು ಡಿಸ್ಟ್ರಿಕ್ಟು.

I	ಮಳವಳ್ಳಿ	..	ಡೆಪ್ಯೂಟಿ ಕಮಿಷನರು.
	ಶ್ರೀರಂಗಪಟ್ಟಣ	..	
	ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು		ಫ್ರೆಂಚ್‌ರಾಕ್ಸ್‌ನಲ್ಲಿರುವ ಅಸಿಸ್ಟೆಂಟ್ ಕಮಿಷನರು.
	ಮಂಡ್ಯ	...	
II	ನಾಗಮಂಗಲ	..	
	ಕೃಷ್ಣರಾಜಪೇಟೆ	...	
III	ಚಾಮರಾಜನಗರ ನಂಜನಗೂಡು ಗುಂಡ್ಲುಪೇಟೆ ತಿರುಮಕೂಡ್ಲು ನರಸೀಪುರ	.. ..	ನಂಜನಗೂಡಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.
IV	ಮೈಸೂರು ಹುಣಸೂರು ಯಡತೊರೆ ಹೆಗ್ಗಡದೇವನಕೋಟೆ	.. ..	ಮೈಸೂರಿನಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಹಾಸನ ಡಿಸ್ಟ್ರಿಕ್ಟು.

	ಹಾಸನ	..	
I	ಅಲೂರು ಸಬ್ ತಾಲ್ಲೂಕು	..	ಡೆಪ್ಯೂಟಿ ಕಮಿಷನರು.
	ಅರಕಲ್ಗೂಡು	....	
	ಮಂಜರಾಬಾದು	..	ಸಕಲೇಶಪುರದಲ್ಲಿರುವ ಅಸಿಸ್ಟೆಂಟ್ ಕಮಿಷನರು.
II	ಬೇಲೂರು	...	
	ಚನ್ನರಾಯಪಟ್ಟಣ	....	
III	ಅರಸೀಕೆರೆ	..	ಹಾಸನದಲ್ಲಿರುವ ಅಸಿಸ್ಟೆಂಟ್ ಕಮಿಷನರು.
	ಹೊಳೆನರಸೀಪುರ	...	

ಶಿವಮೊಗ್ಗ ಡಿಸ್ಟ್ರಿಕ್ಟು.

I	ತೀರ್ಥಹಳ್ಳಿ	..	ಡೆಪ್ಯೂಟಿ ಕಮಿಷನರು.
II	ಶಿವಮೊಗ್ಗ	...	
	ಕುಂಸಿ ಸಬ್ ತಾಲ್ಲೂಕು	...	
	ಹೊನ್ನಾಳಿ	..	ಶಿವಮೊಗ್ಗದಲ್ಲಿರುವ ಅಸಿಸ್ಟೆಂಟ್ ಕಮಿಷನರು.
	ಶಿಕಾರಿಪುರ	...	
	ಚನ್ನಗಿರಿ	...	

III	ಸಾಗರ ಸೊರಬ ನಗರ	ಸಾಗರದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಕಡೂರು ಡಿಸ್ಟ್ರಿಕ್ಟ್.

I	ಚಿಕ್ಕಮಗಳೂರು ಮೂಡಗೆರೆ	ಡೆಪ್ಯುಟಿ ಕಮಿಷನರು.
II	ಕಡೂರು ತರಿಕೆರೆ ಕೊಪ್ಪ ಯಡೆಹಳ್ಳಿ ಸಬ್ ತಾಲ್ಲೂಕು	ಚಿಕ್ಕಮಗಳೂರಲ್ಲಿರುವ ಅಸಿಸ್ಟೆಂಟ್ ಕಮಿಷನರು.

ಚಿತ್ರದುರ್ಗ ಡಿಸ್ಟ್ರಿಕ್ಟ್.

I	ಹಿರಿಯೂರು	ಡೆಪ್ಯುಟಿ ಕಮಿಷನರು.
II	ದಾವಣಗೆರೆ ಹರಿಹರ ಸಬ್ ತಾಲ್ಲೂಕು ಹೊಳಲ್ಕೆರೆ ಹೊಸದುರ್ಗ ಜಗಲೂರು	ದಾವಣಗೆರೆಯಲ್ಲಿರುವ ಅಸಿಸ್ಟೆಂಟ್ ಕಮಿಷನರು.
III	ಜಳ್ಳಕೆರೆ ಮೊಳಕಾಲ್ಮೂರು ಚಿತ್ರದುರ್ಗ	ಚಿತ್ರದುರ್ಗದಲ್ಲಿರುವ ಅಸಿಸ್ಟೆಂಟ್ ಕಮಿಷನರು.

ತಾರೀಖು 10ನೆ ಡಿಸೆಂಬರ್ 1906.

ನಂ. ಆರ್. 5854—ಎಲ್. ಆರ್. 173-06—2, ಸಂ 1888ನೆ ಇಸವಿಯ ಲ್ಯಾಂಡ್ ರೆವಿನ್ಯೂ ಕೋಡಿನಿಂದ ಕೊಡಲ್ಪಟ್ಟ ಅಧಿಕಾರಗಳನ್ನು ಚಲಾಯಿಸುವುದರಲ್ಲಿ, ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು, 1901ನೆ ಇಸವಿ ಜುಲೈ 10ನೆ ತಾರೀಖಿನ 264—ಆರ್. 122ನೆ ನಂಬರಿನ ಇಸ್ತಿಹಾರ್ನಾಮೆಯೊಡನೆ ಪ್ರಕಟಿಸಲ್ಪಟ್ಟ ಸದರಿ ಕೋಡಿನ ನಿಬಂಧನೆಗಳಲ್ಲಿ ಈ ಕೆಳಗೆ ನಮೂದಾಗುವ ತಿದ್ದುಪಾಟುಗಳನ್ನು ಮಾಡಲು ಹುಕುಂ ದಯಪಾಲಿಸಿರುತ್ತಾರೆ :—

1. 47ನೆ ನಿಬಂಧನೆಯ (ಬಿ) ಕಲಮನ್ನು ಬಿಟ್ಟು (ಸಿ) ಕಲಮನ್ನು (ಬಿ) ಕಲಮನ್ನಾಗಿ ಬದಲಾಯಿಸಬೇಕು; ಮತ್ತು ಈ ಕಡೆಯಲ್ಲಿ ಹೇಳಲ್ಪಟ್ಟ ಕಲಮಿನಲ್ಲಿ "ಹಿಂದಿನ ಕಲಂನಲ್ಲಿ ವಿವರಿಸಿರುವ ಸ್ವಭಾವದ ಜಮಿನಿನ ಅಥವಾ" ಎಂಬ ಮಾತುಗಳನ್ನು ಬಿಟ್ಟುಬಿಡಬೇಕು.

2. 48ನೆ ನಿಬಂಧನೆಯಲ್ಲಿ "(ಬಿ) ಮತ್ತು (ಸಿ) ಕಲಂಗಳಲ್ಲಿ" ಎಂಬ ಮಾತುಗಳಿಗೂ ಅಕ್ಷರಗಳಿಗೂ ಬದಲಾಗಿ "(ಬಿ) ಕಲಂನಲ್ಲಿ" ಎಂಬ ಮಾತನ್ನೂ ಅಕ್ಷರವನ್ನೂ ಸೇರಿಸಬೇಕು.

3. 49 ಮತ್ತು 50ನೆ ನಿಬಂಧನೆಗಳ ಮಧ್ಯದಲ್ಲಿ ಈ ಕೆಳಗಿನ ನಿಬಂಧನೆಯನ್ನು ಸೇರಿಸಬೇಕು :—

"49 ಎ. ಒಂದು ರೈಲ್ವೆ ಸ್ಟೇಷನಿನ ಹತ್ತಿರ ಮತ್ತು ಅದರಿಂದ ಅರ್ಧ ಮೈಲಿಯೊಳಗೆ ಅಥವಾ ಸರ್ಕಾರದವರು ಆಗಿಂದಾಗ್ಗೆ ಗೊತ್ತುಮಾಡುವಂಥಾ ಫಾಸಲೆಯೊಳಗೆ ಇರುವ ಜಮಿನಿನ ಹಿಡುವಳಿಯನ್ನು, ಸರ್ಕಾರಿ ಕೆಲಸಕ್ಕೆ ಬೇಕಾದಾಗ ಯಾವ ಪ್ರತಿಫಲವನ್ನೂ ಕೊಡದೆ ಸದರಿ ಜಮಿನು ವಾಪಸು ತೆಗೆದುಕೊಳ್ಳಲ್ಪಡಲು ಗುರಿಯಾಗಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಡೆಪ್ಯುಟಿ ಕಮಿಷನರಿಗೆ ಯುಕ್ತತೋರುವಂತೆ, ವ್ಯವಸಾಯದ ಕೆಲಸಗಳಿಗೆ ಕೊಡಬಹುದು; ಆದರೆ ಕಟ್ಟಡ ಕಟ್ಟುವ ಬಗ್ಗೆ ಮಾತ್ರ, ಸರ್ಕಾರದವರ ಪೂರ್ವಾನುಮತಿಯನ್ನು ವಜಾಂದಾಗಿ ಪಡೆದು ಮತ್ತು ಪ್ರತಿ ಸಂದರ್ಭದಲ್ಲಿಯೂ ಅವರ ಹುಕುಂಗಳಿಗೆ ಒಳಪಟ್ಟು ಅಂಥಾ ಜಮಿನು ಕೊಡಲ್ಪಡತಕ್ಕದ್ದು.

ತಾರೀಖು 12ನೆ ಡಿಸೆಂಬರ್ 1906.

ನಂ. ಆರ್. 5927—ಫಾ. 125-05—5, (1900ನೆ ಇಸವಿಯ 11ನೆ) ಮೈಸೂರು ಫಾರೆಸ್ಟ್ ರೆಗ್ಯುಲೇಷನಿನ 17ನೆ ಪ್ರಕರಣದ ನಿಯಮಗಳನ್ನನುಸರಿಸಿ, ಮೈಸೂರು ಶ್ರೀಮಂತ ಮಹಾರಾಜರವರ ಸರ್ಕಾರದವರು, 1907ನೆ ಇಸವಿಯ ಜನವರಿ ಗುರ್ತಿನ ತಾರೀಖಿನ ಲಾಗಾಯಿತು, ಈ ಇಸ್ತಿಹಾರ್ನಾಮೆಗೆ ಲಗತ್ತಿರುವ ಷೆಡ್ಯೂಲಿನಲ್ಲಿ ಕಂಡ ಚಿತ್ರದುರ್ಗದಿಯೊಳಗಣ ವಿಸ್ತೀರ್ಣವು,